doc-605
T-P-2

Reg No B G 155 12 12 72

In The State **First Golden Jubilee Celebrated Paper 'Satyavadi' daily, Mysore 4**

ರಾಷ್ಟ್ರದಲ್ಲಿ ಪ್ರಥಮ
ಸುವರ್ಣೋತ್ಸವ
ಸಂಭ್ರಮಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಉಭಯ ದಂಡನಾಯಕರ ನಿರ್ಧಾರಕ್ಕೆ ಒಪ್ಪಿಗೆ

ಸಮಿತಿಯ ಒಪ್ಪಿಗೆ

ಜಮ್ಮು ಮತ್ತು ಕಾಶ್ಮೀರ ಭಾಗದಲ್ಲಿ ಭಾರತ ಮತ್ತು ಪಾಕೀಸ್ತಾನ ಸೇನಾಧಿಪತಿಯವರು ಮಾಡಿರುವ ಕದನವಿರಾಮ ರೇಖೆಯ ಗುರುತನ್ನು ನವದೆಹಲಿಯಲ್ಲಿ ಸೇರಿದ್ದ ಮಂತ್ರಿಮಂಡಲದ ರಾಜಕೀಯ ಸಮಿತಿ ಒಪ್ಪಿದೆ.

★

ಕಾಂಗ್ರೆಸ್ ಅಧ್ಯಕ್ಷತೆ ಕುರಿತು

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ನೇಮಕದ ಬಗ್ಗೆ ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸ್ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ರಂಗನಾಥ್ ರವರು ಚರ್ಚಿಸಿದರೆಂದು ಬೆಂಗಳೂರಿನಿಂದ ಬಂದ ವರದಿ ತಿಳಿಸುತ್ತದೆ. ಆ ಸಂದರ್ಭದಲ್ಲಿ ಕೆಲವು ಮಂತ್ರಿಗಳು ಹಾಜರಿದ್ದರು ಗುರುವಾರ ಶ್ರೀ ರಂಗನಾಥ್ ದೆಹಲಿಗೆ ತೆರಳಿವೆ.

★

ಸಾವಿನ ಆರೋಪಣೆ

ಮೈಸೂರು ರಾಜ್ಯದ ಗುಲ್ಬರ್ಗ, ಬಿದರ, ಬಿಜಾಪುರ ಮತ್ತು ಬಳ್ಳಾರಿಯಲ್ಲಿ ಭೀಭಾವ ಪರಿಸ್ಥಿತಿ ತೀವ್ರವಾಗಿದ್ದು, ಹಶುವಿನಿಂದ 5 ಸಾವುಗಳಾಗಿರುವನೆಂದು ಕಾಂಗ್ರೆಸಿನ ಶ್ರೀ ಜಗನ್ನಾಥ ಮಿಶ್ರರವರು ಲೋಕಸಭೆಯಲ್ಲಿ ಆಪಾದಿಸಿದರು. ಆದರೆ ವರದಿ ರಾಜ್ಯ ಸರ್ಕಾರದಿಂದ ಬಂದಿಲ್ಲವೆಂದು ಉತ್ತರ ಕೊಡಲಾಯಿತು.

★

ಅನೀತಿವಂತರ ಪತ್ತೆ

ಸಿ ಬಿ ಐ ನವರು ಅಕ್ಟೋಬರ್‌ನಲ್ಲಿ ದುರ್ನಡತೆ, ಲಂಚ, ಮೋಸ ಮತ್ತು ಫೋರ್ಜರಿ ಸಂಬಂಧದಲ್ಲಿ 20 ಸರ್ಕಾರಿ ಕೆಲಸಗಾರರು ಮತ್ತು 17 ಮಂದಿ ಇತರರನ್ನು ಪತ್ತೆ ಮಾಡಿದರು. ಈ ವೈಕಿ ರಾಜಾಸ್ತಾನದ ಪೇತ್ರ ಕಾಪರ್ ಪ್ರಾಜೆಕ್ಟಿನ ಇಂಜಿನಿಯರ್ ಓರ್ವರು ಅವರು ರೂ. 5000 ಲಂಚ ಪಡೆದಿದ್ದರು.

ಚಿಕ್ಕಹೊಳೆ ಅಣೆಕಟ್ಟು

ಮೈಸೂರು— ಚಿಕ್ಕಹೊಳೆ ಅಣೆಕಟ್ಟು ಒಡೆದಿರುವದು, ಬೆಳೆ, ಮನೆ, ದನಕರುಗಳು ಹಾಳಾಗಿರುವುದು ಸೇರಿ ರೂ. 2 ಕೋಟಿಗಳಷ್ಟು ನಷ್ಟವಾಗಿದೆಯೆಂದು ವಿಭಾಗಾಧಿಕಾರಿ ಶ್ರೀ ಬಾಲರಾಜ್ ಪತ್ರಿಕೆಯವರಿಗೆ ತಿಳಿಸಿದರು.

★

ಪಟ್ಟಣಗಳ ಆಸ್ತಿ ಪರಿಮಿತಿ

ನವದೆಹಲಿ— ಈ ಅಧಿವೇಶನದಲ್ಲಿ ಪಟ್ಟಣಗಳ ಆಸ್ತಿ ಪರಿಮಿತಿ ಮಸೂದೆ ತರಲಾಗುವುದೇ ಎಂಬ ಲೋಕಸಭೆಯಲ್ಲಿ ಶ್ರೀ ಬ್ಯಾನರ್ಜಿಯವರ ಪ್ರಶ್ನೆಗೆ ಸ್ಪಷ್ಟ ಉತ್ತರ ದೊರೆಯಲಿಲ್ಲ

●

ಬೆಲೆ ಏರಿಕೆ ವಿರುದ್ಧ

ಮೈಸೂರು— ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ನಿನ್ನೆ ಬೆಲೆ ತಗ್ಗಿಸಬೇಕೆಂದು ಪ್ರದರ್ಶನ ನಡೆಸಿದ ಕನ್ನಡ ಚಳವಳಿಗಾರರನ್ನು ಬಂಧಿಸಿ ನಂತರ ಬಿಡುಗಡೆ ಮಾಡಲಾಯಿತು.

●

ಪರೀಕ್ಷೆ ಬಹಿಷ್ಕಾರ

ಮೈಸೂರು— ಜೆ ಎಸ್ ಎಸ್ ಕಾಲೇಜಿನ ಉಪಾಧ್ಯಾಯರು ಪ್ರೀಯುನಿವರ್ಸಿಟಿ ಪರೀಕ್ಷೆಯನ್ನು ಬಹಿಷ್ಕರಿಸಲು ನಿರ್ಧರಿಸಿರುವರು ; ಕಾರಣ, ಈ ಸಂಬಂಧದ ಬೋರ್ಡು ರೂ. 1 ಲಕ್ಷ ಕೇಳಿದೆ.

●

ಡಾ ॥ ಮೋದಿ

ನೇತ್ರದಾನಿ ಪದ್ಮಭೂಷಣ ಡಾ. ॥ ಎಂ. ಸಿ. ಮೋದಿ (ಭಾರತಾಧ್ಯಕ್ಷರ ಗೌ ॥ ನೇತ್ರ ವೈದ್ಯರು) ಯವರು ಮಹಾರಾಷ್ಟ್ರದ ಬಾರಾಮತಿಯಲ್ಲಿ ತಾ ॥ 16 ರಂದು ಉಚಿತ ನೇತ್ರ ಚಿಕಿತ್ಸಾ ಶಿಬಿರ ನಡೆಸುವರು.

ದೇವಿಗೆ ವಜ್ರದ ಕಿರೀಟ

ಮಧುರೈ— ಶ್ರೀ ಮೀನಾಕ್ಷಿ ದೇವಾಲಯದಲ್ಲಿನ ಪುನರ್ನಿರ್ಮಾಣ ಸಮಿತಿ ಕೊಟ್ಟ ರೂ. 13 ಲಕ್ಷದ ವಜ್ರದ ಕಿರೀಟವನ್ನು ದೇವಿಗೆ ಅಲಂಕರಿಸಲಾಯಿತು — ಇದರ ಜೊತೆಯಲ್ಲಿ 7000 ಗ್ರಾಂ ಚಿನ್ನದ ಕವಚವನ್ನೂ ತೊಡಿಸಲಾಯಿತು.

★

ಕರಂಜಾ ಯೋಜನೆ

ಬೀದರ್ ಜಿಲ್ಲೆಯ ಕರಂಜಾ ನೀರಾವರಿ ಯೋಜನೆಯ ಕೆಲಸವು, ಅಣೆಕಟ್ಟು ಸ್ಥಳದಲ್ಲೂ ಎಡದಂಡೆ ಕಾಲುವೆ ಸ್ಥಳದಲ್ಲೂ ತ್ವರಿತಗತಿಯಿಂದ ಸಾಗುತ್ತಿದೆ ; ಈ ಕೆಲಸದಿಂದಾಗಿ ಸುಮಾರು 2 ಸಾವಿರ ಜನರಿಗೆ ಉದ್ಯೋಗ ಲಭಿಸುತ್ತಿದೆ.

★

ಗೌರ್ನರರ ಕಾರ್ಯ ಸರಿ

ಮದ್ರಾಸು— ಗೌರ್ನರರು ಶಾಸನಸಭೆಯನ್ನು ಪ್ರೊರೋಗ್ ಮಾಡಿದ್ದು ಸರಿಯೆಂದು ಹೇಳಿ ಸ್ಪೀಕರ್ ಮಾತಯಲಗಂ ಹೈಕೋರ್ಟಿನಲ್ಲಿ ಹಾಕಿದ್ದ ರಿಟ್ ಅರ್ಜಿ ವಜಾ ಆಯಿತು.

★

ಮಂತ್ರಿಮಂಡಲದ ಮೇಲೆ ವಿಶ್ವಾಸ

ಮದರಾಸು— ಶಾಸನಸಭೆಯಲ್ಲಿ ಕರುಣಾನಿಧಿ ಮಂತ್ರಿಮಂಡಲದ ಮೇಲಿನ ವಿಶ್ವಾಸ ನಿರ್ಣಯವು 172 ಒಟುಗಳಿಂದ ಮಂಜೂರಾಯಿತು — ಯಾರೂ ವಿರೋಧಿಸಲಿಲ್ಲ — ಹಳೇ ಕಾಂಗ್ರೆಸ್ ಮತ್ತು ಸ್ವತಂತ್ರ ಪಕ್ಷದವರು ಸಭಾಪರಿತ್ಯಾಗ ಮಾಡಿದ್ದರು — ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಅಣ್ಣಾ ಡಿಎಂಕೆ ಸಭೆಯನ್ನು ಬಹಿಷ್ಕರಿಸಿದ್ದರು.

★ ಮದ್ರಾಸ್— ಪ್ರವಾಹ ತೊಂದರೆಯಿಂದ ನಿನ್ನೆಯೂ ಅನೇಕ ರೈಲುಗಳು ಸಿಲ್ಲಿಸಲ್ಪಟ್ಟಿದ್ದವು.

ಮರಣದಂಡನೆ

ನವದೆಹಲಿ— ಮರಣ ದಂಡನೆ ಇರುವದೆಂದೂ, ಆದರೆ ಆತ್ಯುಗ್ರ ಕಾರ್ಯಗಳಲ್ಲಿ ಪಾತ್ರ ವಿಧಿಸಲಾಗುವುದೆಂದೂ ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

●

ಸ್ಥಳೀಯ-ಉಮೇದುವಾರರು

ಬೆಂಗಳೂರು— ಎಲ್ಲಾ ವಿಷಯಗಳನ್ನೂ ಪರ್ಯಾಲೋಚಿಸಿ, 3000 ಸ್ಥಳೀಯ ಉಮೇದುವಾರರ ಬಗ್ಗೆ ಸೂಕ್ತ ನಿರ್ಧಾರಕ್ಕೆ ಗೊಳ್ಳಲಾಗುವುದೆಂದು ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ತಿಳಿಸಿದರು.

★

ಸಾಲಪರಿಹಾರಕ್ಕೆ

ನವದೆಹಲಿ— ಬ್ರಿಟಿಷ್ ಸರ್ಕಾರವು ಭಾರತಕ್ಕೆ ಸಾಲ ಪರಿಹಾರಕ್ಕಾಗಿ 8 ಮಿಲಿಯ ಪೌಂಡು ಸಾಲಾ ಕೊಡಲಿದೆ.

●

ಸಾಲದ ಯೋಜನೆ

ಬೆಂಗಳೂರು— ರಾಜ್ಯಕ್ಕೆ ಸಾಲದ ಯೋಜನೆ ತಯಾರಿಸುವ ಸಾಲದ ಸಮಿತಿ ನೇಮಿಸಲಾಗುವುದೆಂದು ಪಂಜಾಬು ನ್ಯಾಷನಲ್ ಬ್ಯಾಂಕ್ ಶಾಖೆಯನ್ನು ಉದ್ಘಾಟಿಸುತ್ತಾ ಅರ್ಥಮಂತ್ರಿ ಶ್ರೀ ಘೋರ್ಪಡೆ ಹೇಳಿದರು.

○

ಬಸ್ ಸ್ಟ್ಯಾಂಡ್ ವೇಟಿಂಗ್ ರೂಂ

ಮಡಕೇರಿ— ಭಾರತದ ಸ್ವಾತಂತ್ರ್ಯ ರಜತೋತ್ಸವ ಸಂಬಂಧವಾಗಿ, ಇಲ್ಲಿಯ ಪೌರಸಭೆಯು ರೂ. 1 5 ಲಕ್ಷ ಖರ್ಚಿನಲ್ಲಿ ಬಸ್ ಸ್ಟ್ಯಾಂಡ್ ವೇಟಿಂಗ್ ಕಟ್ಟಿಸುತ್ತಿದೆ

○ ಬಲ್ಗೇರಿಯಾದ ವೆಂಚಾನಲ್ಲಿ ಒಂದು ಪ್ಯಾಸೆಂಜರ್ ರೈಲು ಒಂದು ಗೂಡ್ಸ್ ರೈಲಿಗೆ ಡಿಕ್ಕಿಹೊಡೆದು ಸ್ಲೀಪಿಂಗ್ ಕಾರ್‌ನಲ್ಲಿದ್ದ 26 ಮಂದಿ ಮೃತಪಟ್ಟರು.

ಬಹಿರಾಕಾಶ ಪ್ರಯಾಣ

ಚಂದ್ರನಲ್ಲಿಗೆ ಹೊರಟಿರುವ ರೇನಾಲ್ಡ್ ಇವಾನ್ಸರ ಚಾಲಕತ್ವದಲ್ಲಿ ಹೊರಟಿರುವ ಅಪೊಲೊ 17 ಕಡೇ ಬಹಿರಾಕಾಶ ವಿಮಾನವು ರೂ. 248 4 ಕೋಟಿ ಚಂದ್ರನಂಡೆಗಳೊಡನೆ ವಾಪಸ್ಸಾದರೆ, ಈ ವಿಷಯದಲ್ಲಿ ಮಾನವನ ಪ್ರಯತ್ನದ ಕಡೇ ಪುಟವಾದಂತಾಯಿತು – 1983 ರವರೆಗೆ ಗಗನಯಾತ್ರಿ ಇತರ ಪ್ರಪಂಚಗಳಿಗೆ ಅಗಮಿಸುವುದಿಲ್ಲವೆನ್ನಲಾಗಿದೆ – ಬಹಿರಾಕಾಶ ಸಂಶೋಧನೆ, ಪ್ರಯಾಣಕ್ಕೆ ವಿಪರೀತ ಖರ್ಚಾಗುವಾಗ, ಅಂತರ್ರಾಷ್ಟ್ರೀಯ ಸಹಕಾರ ಅತ್ಯಾವಶ್ಯಕವೆನ್ನಲಾಗಿದೆ . ಅಮೇರಿಕಾ ಏರ್ಪಡಿಸುತ್ತಿರುವ ಭಾರಿ ಬಹಿರಾಕಾಶ ಪ್ರಯಾಣ-ವಿಮಾನವು ರಷ್ಯನ್ನರ ಚಾಲಕತ್ವದಲ್ಲಿ ಹೋಗುವುದೇ ? 15 ತಿಂಗಳ ಪ್ರವಾಸ ; ಎಂತೆಂತಹ ಸ್ತ್ರೀಪುರುಷರು ಹೋಗುವರೋ ? — ರಷ್ಯಾದ ಮಹಿಳೆ ವಾಲೆಂಟಿನಾ ಬೆರಪ್ಕೋವಾ ಹಿಂದಿನ ದಶಕದಲ್ಲಿ ಗಗನಯಾಮಿಯಾಗಿದ್ದರು !

ಜನಸಂಘದ ಸತ್ಯಾಗ್ರಹ

ಗುಲ್ಬರ್ಗ— ಗುಲ್ಬರ್ಗ, ಬೀದರ್, ಬಿಜಾಪುರ ಮತ್ತು ರಾಯಚೂರು ಭಾಗಗಳನ್ನು ಕ್ಷಾಮ ಭಾಗಗಳೆಂದು ಸಾರುವುದಕ್ಕೆ ಸರ್ಕಾರವನ್ನು ಒತ್ತಾಯ ಮಾಡಲು ಜನಸಂಘವು ಕ್ಷಿಪ್ರದಲ್ಲೇ ಧರಣಾ ಸತ್ಯಾಗ್ರಹ ನಡೆಸಲಿರುವುದೆಂದು ರಾಜ್ಯ ಜನ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಯವರು ಹೇಳಿದರು

ದಿವ್ಯವಾಣಿ

ನಾನು ನನ್ನ ನಡತೆ ನೋಡಿಕೊಂಡರೆ, ಅದು ನನ್ನ ಕೀರ್ತಿಯನ್ನು ನೋಡಿಕೊಳ್ಳುತ್ತದೆ — ಚರ್ಚಿಲ್

ವುಡ್‌ಲಾಂಡ್ಸ್ 8 12 72 ರಿಂದ ಅಮೋಘ ಪ್ರಾರಂಭ

ಇಂಗ್ಲೀಷ್ ಮತ್ತು ಕಲರ್ ಅತ್ಯಮೋಘ ಚಿತ್ರ

ಶ್ರೀ ಫಾಂಟಾಸ್ಟಿಕ್ ಸೂಪರ್ ಮೆನ್

ಪಾತ್ರ — ಬ್ರಾಡ್ ಹ್ಯಾರಿಸ್, ಟಾಂ ಕೆನ್ನಾಲ್, ನಿಕ್ ಜೋರ್ಡ್

ದಿನ 3 ಪ್ರದರ್ಶನಗಳು.

ಅಪೆರಾ 8 12 72 ರಿಂದ

ಅತ್ಯಮೋಘ ಹಿಂದಿ ಕಲರ್ ಚಿತ್ರ

ಗಾಂವ್ ಹಮಾರ ಪೆಹರ್ ತುಮಾರ

ಪಾತ್ರ : ರಾಜೇಂದ್ರ ಕುಮಾರ್ ರೇಖ ಸುಜಿತ ಕುಮಾರ್ ಲಲಿತಪವಾರ್

ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್ ದಿನ 3 ಪ್ರದರ್ಶನಗಳು.

SHAKTI

SUDHA

A Superb Tonic

Protect the Cow



ಭಾರತದಲ್ಲಿ ಗೋವಧೆ ಪೂರ್ಣ ನಿಶೇಧವಾಗಲಿ

Quality Printing Neat Binding

Lakshminarasimha Press

Sivarampet, Mysore

Edited Printedand Publishedby Dharmapracharanirata M S Krishna Rao (Propretor) at the Satyavadi Press, Chamarajapuram Mysore

Help The Gorakshana

— Humanitarian Propoganda Monthly—

Contribute Liberally to the National Defence Fund